



# 'ಸ್ವಚ್ಛ ಮಂಗಳೂರು ಅಭಿಯಾನ' ೩ನೇ ಹಂತದ ಉದ್ಘಾಟನೆ

ಮಂಗಳೂರು ಶ್ರೀರಾಮಕೃಷ್ಣ ಮಿಷನ್ನಿನ ನೇತೃತ್ವದಲ್ಲಿ ನಡೆಸಲಾಗುವ **'ಸ್ವಚ್ಛ ಮಂಗಳೂರು ಅಭಿಯಾನ'**ದ ೩ನೇ ಹಂತದ ಉದ್ಘಾಟನೆಯು ೨೦೧೬ರ ಅಕ್ಟೋಬರ್ ೨ ರಂದು ಆಶ್ರಮದಲ್ಲಿ ನೆರವೇರಿತು. ೪೦ ವಾರಗಳಲ್ಲಿ ೪೦ ತಂಡಗಳು ಸುಮಾರು ೪೦೦೦ ಮಂದಿ ಸ್ವಯಂಸೇವಕರ ಸಹಾಯದೊಂದಿಗೆ ಮಂಗಳೂರು ನಗರದ ವಿವಿಧ ಪ್ರದೇಶಗಳಲ್ಲಿ 'ಸ್ವಚ್ಛ ಮಂಗಳೂರು' ಅಭಿಯಾನವನ್ನು ನಡೆಸಲಿದೆ. 'ಸ್ವಚ್ಛ ಭಾರತ ಅಭಿಯಾನ' ದ ಅಂಗವಾಗಿ ನಡೆಯುವ ಈ ಕಾರ್ಯಕ್ರಮದಲ್ಲಿ ೫೦೦೦ಕ್ಕೂ ಹೆಚ್ಚು ಸಲಕರಣೆಗಳನ್ನು ಬಳಸಲಾಗುವುದು.

ಕಾರ್ಯಕ್ರಮದಲ್ಲಿ 'ಸ್ವಚ್ಛ ಮಂಗಳೂರು' ಯೋಜನೆಯ ಸಂಯೋಜಕರಾದ ಕ್ಯಾಪ್ಟನ್ ಗಣೇಶ್ ಕಾರ್ಣಿಕ್ ಅವರು ಸ್ವಾಗತ ಭಾಷಣ ಮಾಡಿದರು. ಮಂಗಳೂರು ರಾಮಕೃಷ್ಣ ಮಿಷನ್ನಿನ ಅಧ್ಯಕ್ಷರಾದ ಸ್ವಾಮಿ ಜಿತಕಾಮಾನಂದಜಿ ಅಭಿಯಾನವನ್ನು ಕುರಿತು ಹೆಚ್ಚಿನ ಮಾಹಿತಿಗಳನ್ನು ನೀಡಿದರು. ರಾಮಕೃಷ್ಣ ಮಿಷನ್ನಿನ ಸಹ ಕಾರ್ಯದರ್ಶಿಗಳಾದ ಸ್ವಾಮಿ ಬೋಧಸಾರಾನಂದಜಿ ಮಹಾರಾಜ್ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತ, ''ಎರಡು ವರ್ಷಗಳಿಂದ ಯಶಸ್ವಿಯಾಗಿ ನಡೆಯುತ್ತ ಬಂದಿರುವ 'ಸ್ವಚ್ಛ ಮಂಗಳೂರು ಅಭಿಯಾನ' ಈಗ ೩ನೇ ಹಂತವನ್ನು ಪ್ರವೇಶಿಸುತ್ತಿದೆ. ಸ್ವಾಮಿ ವಿವೇಕಾನಂದರು ಹೇಳಿದಂತೆ ಈ ಕಾರ್ಯದಲ್ಲಿ ಪ್ರಧಾನವಾಗಿ ಬೇಕಾಗಿರುವುದು ಹಣವಲ್ಲ, ಜನ. ಜನಸಾಮಾನ್ಯರ ಕಾರ್ಯ ಇದಾಗಬೇಕು'' ಎಂದರು. ಸಭೆಯಲ್ಲಿ ಭಾಗವಹಿಸಿದ ನಿಟ್ಟೆ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಎನ್. ವಿನಯ್ ಹೆಗ್ಡೆ, ಶ್ರೀ ಜೆ.ಆರ್.ಲೋಬೋ, ಕ್ಯಾಪ್ಟನ್ ಗಣೇಶ್ ಕಾರ್ಣಿಕ್, ಎಂ.ಆರ್.ಪಿ.ಎಲ್. ನ ನಿರ್ವಾಹಕರಾದ ಶ್ರೀ ವಿ. ಪ್ರಸಾದ್ ಮೊದಲಾದವರು ಭಾಷಣ ಮಾಡಿದರು.

ಈ ಸಂದರ್ಭದಲ್ಲಿ ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಹಲವು ದಶಕಗಳಿಂದ ಸೇವೆ ಸಲ್ಲಿಸಿದ ೩೫ ಮಂದಿ ಪೌರಕಾರ್ಮಿಕರನ್ನು ಸನ್ಮಾನಿಸಲಾಯಿತು. ಸಭಾಕಾರ್ಯಕ್ರಮದ ನಂತರ ಸ್ವಯಂಸೇವಕರಿಗಾಗಿ **'ಸ್ವಚ್ಛ ಭಾರತಕ್ಕಾಗಿ ಸ್ವಚ್ಛ ಮನಸ್ಸು'** ಎಂಬ ವಿಚಾರ ಸಂಕಿರಣ ನಡೆಯಿತು. ಸ್ವಾಮಿ ಬೋಧಸಾರಾನಂದಜಿ ಈ ಸಂಕಿರಣವನ್ನು ಉದ್ಘಾಟಿಸಿದರು. ಪದ್ಮಭೂಷಣ ಡಾ. ಬಿ.ಎಂ. ಹೆಗ್ಡೆ ಹಾಗೂ ವಾಯುದಳದ ಉಪ ಅಧಿಕಾರಿ ರಮೇಶ್ ಕಾರ್ಣಿಕ್ ಉಪನ್ಯಾಸ ನೀಡಿದರು. 'ಸ್ವಚ್ಛ ಮಂಗಳೂರು ಅಭಿಯಾನ'ದ ಸಹ ಸಂಯೋಜಕರಾದ ಸ್ವಾಮಿ ಏಕಗಮ್ಯಾನಂದಜಿ ಸ್ವಯಂಸೇವಕರನ್ನು ಉದ್ದೇಶಿಸಿ ಮಾತನಾಡಿದರು. ಬೆಸೆಂಟ್ ಮಹಿಳಾ ಕಾಲೇಜಿನ ಪ್ರಾಧ್ಯಾಪಕರಾದ ಸ್ಮಿತಾ ಶಣೈ ಕಾರ್ಯಕ್ರಮದ ನಿರೂಪಣೆ ಹಾಗೂ ವಂದನಾರ್ಪಣೆ ಮಾಡಿದರು.



# ೩ ದಿನಗಳ 'ಮೌಲ್ಯಶಿಕ್ಷಣ ವಿಚಾರ ಸಂಕಿರಣ'

ಮಂಗಳೂರು ರಾಮಕೃಷ್ಣ ಮಠವು ಮೂರು ದಿನಗಳ **ಮೌಲ್ಯಶಿಕ್ಷಣ ವಿಚಾರ ಸಂಕಿರಣ** ವನ್ನು ಸೆಪ್ಟೆಂಬರ್ ೧, ೨ ಹಾಗೂ ೩ರಂದು ನಡೆಸಿತು. ಮೊದಲ ದಿನ ನಡೆದ ಇಡೀದಿನದ ಕಾರ್ಯಕ್ರಮದಲ್ಲಿ ಸುಮಾರು ೫೦೦ ಮಂದಿ ಸ್ನಾತಕೋತ್ತರ ವಿದ್ಯಾರ್ಥಿಗಳು ಭಾಗವಹಿಸಿದರು. ಎರಡನೇ ದಿನ ಸುಮಾರು ೨೫೦ ಮಂದಿ ಕಾಲೇಜು ಉಪನ್ಯಾಸಕರು 'ಪುನಶ್ಚೇತನ ಶಿಬಿರ'ದಲ್ಲಿ ಪಾಲ್ಗೊಂಡರು. ಮೂರನೇ ದಿನ ನಡೆದ ವಿಚಾರ ಸಂಕಿರಣದಲ್ಲಿ ಸುಮಾರು ೫೦೦ ಮಂದಿ ಇಂಜಿನಿಯರಿಂಗ್ ವಿದ್ಯಾರ್ಥಿಗಳು ಹಾಜರಿದ್ದರು. ಈ ಸಂದರ್ಭದಲ್ಲಿ ಉನ್ನತ ವಿದ್ಯಾಭ್ಯಾಸಕ್ಕಾಗಿ ೧೨೦ ಮಂದಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಲಾಯಿತು. ಮೂರು ದಿನ ಶಿಬಿರಾರ್ಥಿಗಳಿಗೆ ಊಟೋಪಚಾರ, ಪುಸ್ತಕ ರೂಪದ ಉಡುಗೊರೆ ಹಾಗೂ ಪ್ರಶಸ್ತಿಪತ್ರ ನೀಡಲಾಗಿತ್ತು . ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಸಚಿವರಾದ ಶ್ರೀ ಬಸವರಾಜ ರಾಯರೆಡ್ಡಿಯವರು ಸೆಪ್ಟೆಂಬರ್ ೨ ರಂದು ಆಶ್ರಮವನ್ನು ಸಂದರ್ಶಿಸಿ, ಅಂದಿನ ಕಾರ್ಯಕ್ರಮವನ್ನು ಉದ್ಘಾಟಿಸಿದರು.

Managing Editor : Swami Atmajnananda Editor : Swami Jnanayogananda
Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020